


ಡಾರ್ಕ್‌ರೂಮಿನಲ್ಲಿ ಸೃಷ್ಟಿಯಾಗುವುದನ್ನು ಹೆಚ್ಚಿನ ಪ್ರೇಕ್ಷಕರಿಗೆ ತಲುಪಿಸುವ ಪೋಸ್ಟ್ ಕಾರ್ಡ್



ಗೋವಾದ ಬಾಗಾ ಬೀಚ್‌ನಿಂದ ಕಡಲ ನೀರನ್ನು ಬಳಸಿ ತಯಾರಿಸಿದ ಉಪ್ಪು ಕಾಗದದ ಮುದ್ರಣ

ಕಲಿತೆ. ಆಂಬ್ರೋಟೈಪ್ ಪದವು ಅನಂತತೆ ಎನ್ನುವ ಅರ್ಥದ 'ಆಂಬ್ರೋಸ್' ಎನ್ನುವ ಗ್ರೀಕ್ ಪದದಿಂದ ಬಂದಿದೆ. ಲಾರ್ಜ್ ಫಾರ್ಮ್ಯಾಟ್ ಕ್ಯಾಮೆರಾದ ಸೂಕ್ಷ್ಮತರಹದ ಗಾಜಿನ ತುಂಡಿನ ಮೇಲೆ ನೇರವಾಗಿ ಮೂಡಿಸುವ ಮುದ್ರಣಗಳು ಯಾವುದೇ ಹಾನಿಯ ಲಕ್ಷಣವನ್ನು ತೋರಿಸುವುದಿಲ್ಲ ಅಥವಾ ಸಮಯದೊಂದಿಗೆ ಮಸುಕಾಗುವುದೂ ಇಲ್ಲ.

2019ರಲ್ಲಿ ಮ್ಯೂನಿಕ್‌ನಲ್ಲಿ ನಡೆದ ಇನ್ನೊಂದು ಆರ್ಟ್ ರೆಸಿಡೆನ್ಸಿ ಕಾರ್ಯಕ್ರಮವನ್ನು ಮುಗಿಸಿ ಹಿಂದಿರುಗಿದ ಮೇಲೆ ನನ್ನದೇ ಆದ ಡಾರ್ಕ್‌ರೂಮ್ ಸ್ಥಾಪಿಸುವ ಧೈರ್ಯ ಮತ್ತು ಆತ್ಮವಿಶ್ವಾಸ ಪಡೆದುಕೊಂಡೆ. ಅದೇ ವರ್ಷದ ನವೆಂಬರಿನಲ್ಲಿ ಕಲಾವಿದೆ ಇಂದೂ ಆಂಟನಿ ಮತ್ತು ನಾನು ಬೆಂಗಳೂರಿನ ಕುಕ್ ಟೌನಿನಲ್ಲಿ ಒಂದು ಅಪಾರ್ಟ್‌ಮೆಂಟ್ ಬಾಡಿಗೆಗೆ ಪಡೆದುಕೊಂಡು, ಅದರಲ್ಲಿನ ಸ್ನಾನದ ಮನೆಯೊಂದನ್ನು ಡಾರ್ಕ್‌ರೂಮ್ ಆಗಿ ಪರಿವರ್ತಿಸಿದೆವು. ಇದಾಗಿ ಸ್ವಲ್ಪ ಸಮಯದಲ್ಲಿಯೇ ಅಪರ್ಣಾ ನೋರಿ ಮತ್ತು ಕೃಷಾನು ಚಟರ್ಜಿ ಎನ್ನುವ ಇಬ್ಬರು ಲೆನ್ಸ್ ಬಳಸುವ ಕಲಾವಿದರು ಒಂದು ಸ್ವತಂತ್ರ ನಿರ್ವಹಣೆಯ ಸಮೂಹ (ಲೂಸ್ ಕಲೆಕ್ಟಿವ್)ವನ್ನು ಜೊತೆಯಾಗಿ ರೂಪಿಸಲು ನಮ್ಮೊಡನೆ ಸೇರಿಕೊಂಡರು. 'ಕಾಣಿಕೆ' ಎಂದು ಈ ಸಮೂಹವನ್ನು ಕರೆದೆವು. ಇದು ನಮಗೆ ನಾವೇ ನೀಡಿಕೊಂಡ ಅರ್ಥಪೂರ್ಣ ಉಡುಗೊರೆಯಾಗಿತ್ತು.

'ಕಾಣಿಕೆ'ಯನ್ನು ಸ್ಥಾಪಿಸಿದ ಕೆಲವೇ ತಿಂಗಳುಗಳಲ್ಲಿ ಪ್ರಪಂಚವು ಕೋವಿಡ್ ಸಾಂಕ್ರಾಮಿಕ ರೋಗದ ವ್ಯೂಹಕ್ಕೆ ಸಿಲುಕಿಕೊಂಡಿತ್ತು. ಬೌದ್ಧಿಕ ಮತ್ತು ಕಲಾತ್ಮಕ ಆಸಕ್ತಿಗಳ ಹಿನ್ನೆಲೆಯಲ್ಲಿ ನಮ್ಮ ಈ ಸಮೂಹವು ಆಗಾಗ ಭೇಟಿಯಾಗುತ್ತಿತ್ತು. ಅನಂತರ ಬಂದ ಅನಿಶ್ಚಿತತೆಯ ಅವಧಿಯಲ್ಲಿ ಈ ಜಾಗವು ಒಂದು ಆರಾಮದಾಯಕ ದ್ವೀಪವಾಗಿ ರೂಪಾಂತರಗೊಂಡಿತು. ಮುಂದಿನ ಕೆಲವು ತಿಂಗಳಲ್ಲಿ ನಾವು ಜೀವಿಸುತ್ತಿರುವ ವಿಲಕ್ಷಣ ಕಾಲಾವಧಿಯನ್ನು ದಾಖಲಿಸುವುದು ಅಗತ್ಯವೆಂದು ಅರಿತುಕೊಂಡೆವು. ಈ ಹೊತ್ತಿನಲ್ಲಿ ನಾವು ಬರವಣಿಗೆ ಮಾಡಿದೆವು, ಛಾಯಾಚಿತ್ರಗಳನ್ನು ತೆಗೆದೆವು, ಚಿತ್ರಗಳನ್ನು ರಚಿಸಿದೆವು ಮತ್ತು ಹೊಲಿದೆವು. ಇವೆಲ್ಲ ಸೇರಿ ಸುಂದರವಾದ, ಕೈಯಲ್ಲಿ ಮಾಡಿದ ಪುಸ್ತಕವೊಂದು ಹೊರಹೊಮ್ಮಿತು.

ಮನುಷ್ಯ ಸ್ಪರ್ಶವು ನಮ್ಮ ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮದ ಪ್ರಾಮುಖ್ಯವನ್ನು ಕೋವಿಡ್ ಸಾಂಕ್ರಾಮಿಕ ನಮಗೆ ನೆನಪಿಸಿಕೊಟ್ಟಿತು. ಸ್ಪರ್ಶಿಸುವ ಸಾಮರ್ಥ್ಯವನ್ನು ಪ್ರಶಂಶಿಸಲು ಡಾರ್ಕ್‌ರೂಮ್ ನೆರವಾಯಿತು ಮತ್ತು ನಮ್ಮ ಕೈಗಳನ್ನೂ ಕಾರ್ಯೋದ್ಯುಕ್ತವಾಗಿಸಿತು. ರಾಸಾಯನಿಕಗಳ ಮಿಶ್ರಣ ಕಾರ್ಯವಿರಬಹುದು, ಸೆನ್ಸಿಟೈಜರ್ ದ್ರಾವಣವನ್ನು ಮೇಲ್ಪದರಗಳ ಮೇಲೆ ಹಚ್ಚುವುದಾಗಿರಬಹುದು, ವಿವಿಧ ಟೆಕ್ಸ್‌ಚರ್‌ಗಳ ಕಾಗದಗಳ ಬಳಕೆ ಇರಬಹುದು ಅಥವಾ ಸುರಿಯುವ ನೀರಿನ ಅಡಿಯಲ್ಲಿ ಪ್ರಿಂಟ್‌ಗಳನ್ನು ತೊಳೆಯುವುದಾಗಿರಬಹುದು– ಇಂಥ ಕೆಲಸಗಳು ಪುನಃಶ್ಚೇತನದಾಯಿಯಾಗಿದ್ದವು. ಹೀಗಾಗಿ ಪ್ರತಿದಿನ ಡಾರ್ಕ್‌ರೂಮಿನಲ್ಲಿ ಕೆಲಸ ಮಾಡುವುದು ಮತ್ತು ಸಹೋದ್ಯೋಗಿಗಳ ಜೊತೆ ಟಿಪ್ಪಣಿಗಳನ್ನು ವಿನಿಮಯ ಮಾಡುವುದಕ್ಕಾಗಿ ನಾವು ಕಾತರದಿಂದ ಕಾದಿರುತ್ತಿದ್ದೆವು.

ಇನ್ನಷ್ಟು ಹೆಚ್ಚಿನ ವೈವಿಧ್ಯಗಳನ್ನು ಒಳಗೊಂಡಿರುವ ಛಾಯಾಗ್ರಹಣ ಸಂಸ್ಕೃತಿಯ ಹೆಜ್ಜೆಗುರುತುಗಳ ಮರು ಅನ್ವೇಷಣೆ ನಡೆಸುವುದರಿಂದ, ಇಂಥ ಕರಕುಶಲತೆ ಪ್ರಕಟವಾಗುವಲ್ಲಿ ತೋರಿಬರುವ ಅನಿವಾರ್ಯ ಭಿನ್ನತೆಗಳನ್ನು ಆಚರಿಸುವುದರಿಂದ ನಮ್ಮ ಕಲಾತ್ಮಕ ಪ್ರಯಾಣವು ಉತ್ತಮವಾಗುತ್ತದೆ ಎನ್ನುವುದು 'ಕಾಣಿಕೆ'ಯ, ನಮ್ಮ ನಂಬಿಕೆ. ಇದು ನಮ್ಮ ಕೆಲಸಕ್ಕೆ ಬಹಳಷ್ಟು ಅಗತ್ಯವಿರುವ ಬಹುತ್ವವನ್ನು ನೀಡುತ್ತದೆ. ಈ ಮೂಲಕ ನಮ್ಮ ಕೆಲಸ ಇನ್ನಷ್ಟು ವೈಯಕ್ತಿಕ ಹಾಗೂ ವಿಸ್ತೃತ ಮಾದರಿಯಲ್ಲಿ ಅಭಿವ್ಯಕ್ತಗೊಳ್ಳಲು ಸಾಧ್ಯ. ಒಂದು ಸ್ಟುಡಿಯೊ ಎಂಬ ನೆಲೆಯಲ್ಲಿ ಕೆಲಸ ಮಾಡುತ್ತಿರುವ ನಮಗೆ ಛಾಯಾಗ್ರಹಣಕ್ಕೆ ಒದಗಬಹುದಾದ ಏಕರೂಪತೆಯ ಅಪಾಯದ ಬಗ್ಗೆಯೂ ಅರಿವಿದೆ. ಹೀಗಾಗಿ ನಾವು ವಿಭಿನ್ನ ಬಗೆಯಲ್ಲಿ ನಮ್ಮ ಡಾರ್ಕ್‌ರೂಮಿನಲ್ಲಿ ಕೈಯಾಡಿಸಲು ಆಹ್ವಾನಿಸುತ್ತೇವೆ. ಈ ಮೂಲಕ ಛಾಯಾಗ್ರಹಣ ಕಲೆ ಹಿಂದಿನ ಕಾಲದಲ್ಲಿ ಹೇಗಿತ್ತು, ಮುಂದೆ ಹೇಗೆಲ್ಲ ಇರಲು ಸಾಧ್ಯ ಎನ್ನುವುದನ್ನು ಕಂಡುಕೊಳ್ಳಲು ಅವರಿಗೆ ಅನುಕೂಲ ಮಾಡಿಕೊಡುತ್ತೇವೆ.

ನನ್ನ ಮಟ್ಟಿಗೆ ಸ್ಟುಡಿಯೊ ಎಂದರೆ, ಅದರಲ್ಲೂ ವಿಶೇಷವಾಗಿ ಡಾರ್ಕ್‌ರೂಮ್ ಎಂದರೆ, ನನ್ನನ್ನು ಕಬಳಿಸಿಯೇ ಬಿಡುವ ಡಿಜಿಟಲ್ ಪ್ರಪಂಚದಿಂದ ನಿಯತವಾಗಿ ಡೀಟಾಕ್ಸ್ ಮಾಡಿಕೊಳ್ಳುವ ಸಲುವಾಗಿ ಮರಮರಳಿ ಸೇರಿಕೊಳ್ಳುವ ಹಾಗೂ ಛಾಯಾಗ್ರಹಣದ ಹಿರೀಕರಿಗೆ ಗೌರವ ಸಲ್ಲಿಸುವ ಜಾಗವಾಗಿದೆ. ಅವರ ಪರಿಶ್ರಮವಿಲ್ಲದೆ ಹೋಗಿದ್ದರೆ ಛಾಯಾಗ್ರಹಣ ನೀಡುವ ಆನಂದ ಸಾಧ್ಯವೇ ಇರುತ್ತಿರಲಿಲ್ಲ.

ಪ್ರತಿಕ್ರಿಯಿಸಿ: feedback@sudha.co.in